

# ಕಥೆ



## ರಾಜಕುಮಾರ ಕುಲಕರ್ಣಿ

ಕಲೆ: ರಾಮಕೃಷ್ಣ ಸಿದ್ರಪಾಲ

# ಗ್ರಾಮಾಯಣ

ಬಸವರಾಜಪ್ಪ ಆಡಿದ ಮಾತು ಕೇಳಿ ರಾಮಚಂದ್ರ ಮೇಷ್ಟ್ರಿಗೆ ಎದೆ ಮೇಲೆ ಮುಷ್ಟಿಯಿಂದ ಗುದ್ದಿದಂಗಾಗಿತ್ತು. ಎಂದೂ ಇಷ್ಟೊಂದು ಬಿರುಸಿನಿಂದ ಬಸವರಾಜಪ್ಪ ಮಾತನಾಡಿದವನಲ್ಲ. ಹತ್ತು ವರ್ಷಗಳ ಹಿಂದೆ ಪಕ್ಕದ ಗಣಜಲಖೇಡದಿಂದ ಕುಮಸಿಗೆ ವರ್ಗವಾಗಿ ಬಂದ ರಾಮಚಂದ್ರ ಮೇಷ್ಟ್ರಿಗೆ ಊರಿನಲ್ಲಿ ವಾಸಿಸಲು ಒಂದು ನೆಲೆ ಅಂತ ಸಿಕ್ಕಿದ್ದು ಬಸವರಾಜಪ್ಪನ ಮನೆನಲ್ಲಿ. ಮೇಷ್ಟ್ರ ಸಣ್ಣ ಕುಟುಂಬ ನೆಲೆ ನಿಲ್ಲಲು ಎರಡು ಕೋಣೆಗಳಷ್ಟು ಜಾಗ ಸಾಕಿತ್ತು. ಬಸವರಾಜಪ್ಪನ ಮನೆಯಲ್ಲಿ ಪಡಸಾಲೆಗೆ ಹತ್ತಿಕೊಂಡಿದ್ದ ಎರಡು ಕೋಣೆಗಳು ಖಾಲಿ ಇದ್ದವು. ತೊಂದರೆ ಅನಿಸದಿದ್ದರೆ ಆ ಕೋಣೆಗಳಲ್ಲಿ ಸಂಸಾರ ಹೂಡಬಹುದೆಂದು ಬಸವರಾಜಪ್ಪ, ರಾಮಚಂದ್ರ ಮೇಷ್ಟ್ರಿಗೆ ಹೇಳಿದ್ದ. ಮೇಷ್ಟ್ರಿಗೂ ಅಪರಿಚಿತ ಜಾಗದಲ್ಲಿ ಒಳ್ಳೆಯ ಜನರ ಸಾಂಗತ್ಯದ ಅಗತ್ಯವಿತ್ತು. ಮಗ ಬೆಂಗಳೂರಿನಲ್ಲಿ ಪಿ.ಯು.ಸಿ ಓದುತ್ತಿದ್ದು ತಾವಿಬ್ಬರೇ ಗಂಡ ಹೆಂಡತಿ ಇರುವುದರಿಂದ ಎರಡು ಕೋಣೆಗಳ ಜಾಗ ಸಂಸಾರ ಹೂಡಲು ತಕ್ಕುದಾಗಿತ್ತು. ಹೀಗೆ ಬಸವರಾಜಪ್ಪನ ಮನೆ ಸೇರಿದ ರಾಮಚಂದ್ರ ಮೇಷ್ಟ್ರು ತಮ್ಮ ನಡೆನುಡಿಯಿಂದ ಹತ್ತಿರವಾಗಿ ಅವನ ಮನಸ್ಸು ಸೇರಲು ತಡವಾಗಲಿಲ್ಲ. ಮೇಷ್ಟ್ರ ಪತ್ನಿ ಸೀತಮ್ಮ ಪರಮಸಾಧ್ವಿ ಹೆಣ್ಣುಮಗಳು. ಅವರು ಬಸವರಾಜಪ್ಪನ ಪತ್ನಿ ಪಾರ್ವತಿಗೆ ಬಲುಬೇಗನೆ ಅಕ್ಕನ ಸ್ಥಾನ ತುಂಬಿದರು. ಬಸವರಾಜಪ್ಪನ ಎರಡು ಮಕ್ಕಳು ಕೂಡ ಮೇಷ್ಟ್ರ ಕುಟುಂಬದೊಂದಿಗೆ ಹೊಂದಿಕೊಂಡು ದೊಡ್ಡಪ್ಪ, ದೊಡ್ಡಮ್ಮ ಎಂದು ಬಾಯಿತುಂಬಾ ಕರೆಯುತ್ತಿದ್ದರು. ಈ ಹತ್ತು ವರ್ಷಗಳಲ್ಲಿ ಎರಡು ಕುಟುಂಬಗಳ ನಡುವೆ ಒಮ್ಮೆ ಕೂಡ ಅಸಮಾಧಾನ, ಅಸಹನೆ ಹಣಿಕಿಕ್ಕಿರಲಿಲ್ಲ. ಇವತ್ತು ಮಾತ್ರ ಬಸವರಾಜಪ್ಪನ ನಿಯಂತ್ರಣ ಮೀರಿ ನಾಲಗೆ ಮಾತು ಹೊರಹಾಕಿತ್ತು. ರಾಮಚಂದ್ರ ಮೇಷ್ಟ್ರಿಗೆ ಕುಳಿತಲ್ಲಿ ನಿಂತಲ್ಲಿ ಬಸವರಾಜಪ್ಪನ ಮಾತುಗಳೇ ಕಿವಿಯಲ್ಲಿ ಪ್ರತಿಧ್ವನಿಸಿದಂತಾಗಿ ಮಕ್ಕಳಿಗೆ ಪಾಠ ಮಾಡಲು ಆಸಕ್ತಿ ಇಲ್ಲದಂತಾಗಿ ಹೆಡ್‌ಮೇಷ್ಟ್ರಿಗೆ ಹೇಳಿ ಮನೆಗೆ ಬಂದವರು ಕೋಣೆಯಲ್ಲಿ ಅಡ್ಡಾದರು. ಎಂದೂ ಶಾಲೆಯ ಕೆಲಸದ ನಡುವೆ ಮನೆಗೆ ಬರದ ಪತಿ ಹೀಗೆ ಮನೆಗೆ ಬಂದು ಮಲಗಿರುವುದು ನೋಡಿ ಗಾಬರಿಯಾದ ಸೀತಮ್ಮ ಜ್ವರ ಬಂದಿರಬಹುದೆಂದು ಹಣೆಮುಟ್ಟಿ ನೋಡಿದರು. ಪತ್ನಿಯ ಕೈ ಸ್ಪರ್ಶದಿಂದ ಎಚ್ಚರಾದ ರಾಮಚಂದ್ರಪ್ಪನವರು ಕಣ್ಣುಗಳನ್ನು ತೆರೆದದ್ದೇ ನೀರಧಾರೆ ಕಪೋಲದ ಮೂಲಕ ಹರಿದು ತಲೆದಿಂಬನ್ನು ತೋಯಿಸಿತು. ಗಂಡನ ದುಃಖಕ್ಕೆ ಇಂದು ಬೆಳಗ್ಗೆ ಬಸವರಾಜಪ್ಪ ಆಡಿದ ಮಾತುಗಳೇ ಕಾರಣ ಎಂದು ಸೀತಮ್ಮನವರಿಗೆ